# ಮಹಿಳೆಯರ ಭಾಗವಹಿಸುವಿಕೆ ಮತ್ತು ಸಬಲೀಕರಣದ ಮೂಲಕ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆ: ವಿಮರ್ಶಾತ್ಮಕ ಅಧ್ಯಯನ

**ಶೈಲೇಶ್ ಕುಮಾರ್ ಸಿ.[1] & ನಾಗರಾಜು ಎನ್.[2]**

[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ಶಿವಗಂಗೋತ್ರಿ, ದಾವಣಗೆರೆ.

[2]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ ಶಿವಗಂಗೋತ್ರಿ, ದಾವಣಗೆರೆ.

**DOI: https://doi.org/10.5281/zenodo.18850686**

## ABSTRACT:

ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆಯಲ್ಲಿ ಬಹುಮುಖ್ಯವಾದ ಪರಿಣಾಮವನ್ನು ಬೀರುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಗುಣಮಟ್ಟವು ಕೇವಲ ಚುನಾವಣೆಗಳಿಂದ ಅಲ್ಲ, ಸಮಾನ ಪ್ರತಿನಿಧಿತ್ವ, ಅರ್ಥಪೂರ್ಣ ಪಾಲ್ಗೊಳ್ಳುವಿಕೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಗಳಿಂದ ನಿರ್ಧರಿಸಲಾಗುತ್ತದೆ. ಭಾರತ ಸಂವಿಧಾನವು ಲಿಂಗಸಮಾನತೆಯನ್ನು ಒಪ್ಪಿಕೊಂಡಿದ್ದು, ನಮ್ಮ ಸಂಸತ್ತು 1993ರಲ್ಲಿ ಸಂವಿಧಾನಕ್ಕೆ 73ನೆಯ ಮತ್ತು 74ನೆಯ ತಿದ್ದುಪಡಿಯನ್ನು ಕ್ರಮವಾಗಿ ತರುವ ಮೂಲಕ ಮಹಿಳೆಯರಿಗೆ ಗ್ರಾಮೀಣ ಮತ್ತು ನಗರ ಸಂಬಂಧಿತ ಸ್ಥಳೀಯ ಸಂಸ್ಥೆಗಳಲ್ಲಿ ಸೂಕ್ತವಾದ ಪ್ರಾತಿನಿಧ್ಯವನ್ನು ಮೀಸಲಾತಿಯ ಆಧಾರಿತವಾಗಿಯೇ ನೀಡಲಾಗಿರುತ್ತದೆ. ಇದರಿಂದ ಮಹಿಳಾ ಜನಸಮುದಾಯಕ್ಕೆ ಸಂಖ್ಯಾತ್ಮಕವಾಗಿ ಪ್ರತಿನಿಧಿತ್ವ ಹೆಚ್ಚಾಗಿದ್ದರೂ, ಗುಣಾತ್ಮಕ ಸಬಲೀಕರಣವೂ ಅಗತ್ಯವಿದೆ. ಮಹಿಳಾ ನಾಯಕತ್ವವು ನೀತಿ ರೂಪಣೆ, ಸಾರ್ವಜನಿಕ ಸಂಪನ್ಮೂಲ ಬಳಕೆ, ಪಾರದರ್ಶಕ ಆಡಳಿತ ಮತ್ತು ಸಾಮಾಜಿಕ ನ್ಯಾಯವನ್ನು ಉತ್ತೇಜಿಸುತ್ತದೆ. ಗ್ರಾಮ, ತಾಲೂಕು, ನಗರ ಸಂಸ್ಥೆಗಳಲ್ಲಿ ಮಹಿಳೆಯ ನಿರ್ಧಾರ ಸಾಮರ್ಥ್ಯವು ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಈ ಸಬಲೀಕರಣಕ್ಕೆ ಪ್ರಾಕ್ಸಿ ರಾಜಕಾರಣ, ಪಿತೃತ್ವ, ಆರ್ಥಿಕ ಅವಲಂಬನೆ, ರಾಜಕೀಯ ಹಿಂಸಾಚಾರ ಮತ್ತು ಶೈಕ್ಷಣಿಕ ಮಿತಿಗಳು ಅಡ್ಡಿಯಾಗುತ್ತವೆ. ಅವುಗಳನ್ನು ದಾಟಲು ನಾಯಕತ್ವ ತರಬೇತಿ, ಕಾನೂನು ಜಾಗೃತಿ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಮನೋಭಾವ ಬದಲಾವಣೆ ಅಗತ್ಯ. ಒಟ್ಟಾರೆ, ಮಹಿಳೆಯರ ಸಕ್ರಿಯ ಹಾಗೂ ಅರ್ಥಪೂರ್ಣ ಭಾಗವಹಿಸುವಿಕೆ ಇಲ್ಲದೆ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆ ಸಾಧ್ಯವಿಲ್ಲ; ಮಹಿಳಾ ಸಬಲೀಕರಣವು ಸಮಗ್ರ, ಒಳಗೊಂಡ ಮತ್ತು ಜವಾಬ್ದಾರಿಯುತ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ಶಕ್ತಿಯಾಗಿದೆ.

## KEYWORDS:

ಮಹಿಳಾ ಭಾಗವಹಿಸುವಿಕೆ, ಮಹಿಳಾ ಸಬಲೀಕರಣ, ಪ್ರಜಾಸತ್ತಾತ್ಮಕ, ಸಂಸ್ಥೆಗಳು, ಲಿಂಗ ಸಮಾನತೆ, ರಾಜಕೀಯ ಪ್ರತಿನಿಧಿತ್ವ, ಪಂಚಾಯತ್ ರಾಜ್, ಸಾಮಾಜಿಕ ನ್ಯಾಯ.

**ಪೀಠಿಕೆ**

ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ಮೌಲ್ಯಗಳು ಸ್ವಾತಂತ್ರ್ಯತೆ, ಸಮಾನತೆ, ನ್ಯಾಯ ಮತ್ತು ಜನಪಾಲ್ಗೊಳ್ಳುವಿಕೆಯೂ ವಿಧಾನಮಂಡಲ, ಸಂಸತ್ತು, ಕಾರ್ಯಾಂಗ, ನ್ಯಾಯಾಂಗ ಮತ್ತು ಸ್ಥಳೀಯ ಸ್ವಯಂ ಸಂಸ್ಥೆಗಳು ಈ ಮೌಲ್ಯಗಳನ್ನು ಅನುಷ್ಠಾನಗೊಳಿಸುತ್ತವೆ. ಆದರೆ, ಈ ಸಂಸ್ಥೆಗಳ ಪರಿಣಾಮಕಾರಿತ್ವವು ವಿವಿಧ ಸಾಮಾಜಿಕ ವರ್ಗಗಳ ಸಮರ್ಪಕ ಪ್ರತಿನಿಧಿತ್ವದ ಮೇಲೆ ಅವಲಂಬಿತವಾಗಿದೆ. ಮಹಿಳೆಯರು ಇತಿಹಾಸಾತ್ಮಕವಾಗಿ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹಿಂದುಳಿದವರು ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಅವರ ಭಾಗವಹಿಸುವಿಕೆ ಕಡಿಮೆ ಇರುತ್ತದೆ. ಭಾರತ ಸಂವಿಧಾನವು ಈ ಬಗೆಯಲ್ಲಿನ ಲಿಂಗಭೇದವನ್ನು ಸಂಪೂರ್ಣವಾಗಿಯೇ ನಿಷೇಧಿಸುವ ಸಲುವಾಗಿ ಸಮಾನತೆಯನ್ನು ಒಪ್ಪಿಕೊಳ್ಳುವ ಮೂಲಕ ಸಂವಿಧಾನಕ್ಕೆ 1993ರಲ್ಲಿ 73ನೆಯ ಮತ್ತು 74ನೆಯ ತಿದ್ದುಪಡಿ ಕಾಯಿದೆಗಳಲ್ಲಿ ಮಹಿಳೆಯರಿಗೆ ಸ್ಥಳೀಯ ಗ್ರಾಮೀಣ ಮತ್ತು ನಗರ ಸ್ವಯಂ ಸಂಸ್ಥೆಗಳಲ್ಲಿ ಸೂಕ್ತ ಪ್ರಾತಿನಿಧ್ಯದ ಮೂಲಕ ಮೀಸಲಾತಿ ನೀಡಲಾಗಿರುತ್ತದೆ. ಈ ಕ್ರಮವು ಸಂಖ್ಯಾತ್ಮಕವಾಗಿ ಮಹಿಳೆಯರ ರಾಜಕೀಯ ಪ್ರವೇಶವನ್ನು ವಿಸ್ತರಿಸಿದೆ. ಆದರೆ ಗುಣಾತ್ಮಕ ಸಬಲೀಕರಣ ಇನ್ನೂ ಅಗತ್ಯವಾಗಿರುತ್ತದೆ. ಮಹಿಳೆಯರ ಭಾಗವಹಿಸುವಿಕೆ ನಿರ್ಧಾರ ಸಾಮರ್ಥ್ಯ, ನಾಯಕತ್ವ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಮಾನ್ಯತೆಯನ್ನು ಒಳಗೊಂಡಿರಬೇಕು. ಮಹಿಳೆಯರ ನಾಯಕತ್ವವು ಸ್ಥಳೀಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುತ್ತದೆ. ಆದರೆ, ಪ್ರಾಕ್ಸಿ ರಾಜಕಾರಣ, ಪಿತೃತ್ವ, ಆರ್ಥಿಕ ಅವಲಂಬನೆ ಮತ್ತು ರಾಜಕೀಯ ಹಿಂಸಾಚಾರ ಅಡ್ಡಿಯಾಗುತ್ತವೆ. ಆದ್ದರಿಂದ ಕೇವಲ ಮೀಸಲಾತಿ ಸಾಕಾಗದೆ, ಗುಣಾತ್ಮಕ ಸಬಲೀಕರಣ, ನಾಯಕತ್ವ ತರಬೇತಿ ಮತ್ತು ಸಾಮಾಜಿಕ ಮನೋಭಾವದ ಬದಲಾವಣೆಯೂ ಕೂಡ ಅಗತ್ಯವಾಗಿದೆ. ಪ್ರಸ್ತುತ ಅಧ್ಯಯನವು ಮಹಿಳೆಯರ ಭಾಗವಹಿಸುವಿಕೆ ಮತ್ತು ಸಬಲೀಕರಣವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆಗೆ ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ಈ ಮುಂದಿನಂತೆ ಸಮಗ್ರವಾಗಿ ವಿಶ್ಲೇಷಿಸಲಾಗುತ್ತದೆ.

ಸಂವಿಧಾನಾತ್ಮಕ ಮತ್ತು ಸೈದ್ಧಾಂತಿಕ ನೆಲೆ: ಭಾರತ ಸಂವಿಧಾನವು ಲಿಂಗ ಆಧಾರಿತ ಸಮಾನತೆಯನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲಭೂತ ಮೌಲ್ಯವಾಗಿ ಗುರುತಿಸಿರುತ್ತದೆ. ಸಂವಿಧಾನದ ಮೂರನೆಯ ಭಾಗದಲ್ಲಿನ ಮೂಲಭೂತ ಹಕ್ಕುಗಳಲ್ಲಿ ಅನುಚ್ಛೇದ–14, 15 ಮತ್ತು 16ರ ಮೂಲಕ ಮಹಿಳೆಯರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಗೆ ಸಂವಿಧಾನಾತ್ಮಕ ಭದ್ರತೆಯನ್ನು ನೀಡಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳಾ ಹಕ್ಕುಗಳು ಮತ್ತು ಸಾಮಾಜಿಕ ಸಮಾನತೆಯ ಪರವಾಗಿ ದೃಢ ನಿಲುವು ತಾಳಿದರು. ಸಂವಿಧಾನವು ಮಹಿಳೆಯರಿಗೆ ರಾಜಕೀಯ ಪಾಲ್ಗೊಳ್ಳುವ ಹಕ್ಕನ್ನು ಭದ್ರಪಡಿಸಿ, ವಿಶೇಷ ಕ್ರಮಗಳ ಹಕ್ಕನ್ನು ಅನುಚ್ಛೇದ–15(3)ರಲ್ಲಿ ರಾಜ್ಯಕ್ಕೆ ನೀಡಿರುತ್ತದೆ. 73ನೆಯ ಮತ್ತು 74ನೆಯ ತಿದ್ದುಪಡಿ ಕಾಯ್ದೆಗಳಿಂದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡಾ 33ರಷ್ಟು ಮೀಸಲಾತಿ ನೀಡಿದ್ದು, ಕೆಲವು ರಾಜ್ಯಗಳಲ್ಲಿ ಅದು ಶೇಕಡಾ 50ರಷ್ಟರವರೆಗೆ ವಿಸ್ತರಿಸಲಾಗಿರುತ್ತದೆ. ಇದು ಮಹಿಳೆಯರ ಸಂಖ್ಯಾತ್ಮಕ ಪ್ರತಿನಿಧಿತ್ವವನ್ನು ಹೆಚ್ಚಿಸಿರುತ್ತದೆ. ಸೈದ್ಧಾಂತಿಕವಾಗಿ, ಉದಾರವಾಗಿ ಮಹಿಳಾವಾದವು ಇದೇ ಬಗೆಯಲ್ಲಿನ ಸಮಾನ ಹಕ್ಕುಗಳ ಅಗತ್ಯವನ್ನು ಒತ್ತಿಹೇಳುತ್ತದೆ ಮತ್ತು ಪ್ರಜಾಸತ್ತಾತ್ಮಕ ತತ್ವಗಳು ನೇರ ಭಾಗವಹಿಸುವಿಕೆಯನ್ನು ಹೆಚ್ಚು ಪ್ರೋತ್ಸಾಹಿಸುತ್ತವೆ. ಈ ಎರಡೂ ತತ್ವಗಳು ಮಹಿಳೆಯರ ಸಕ್ರಿಯ ಹಾಗೂ ಅರ್ಥಪೂರ್ಣ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಸಮರ್ಥಿಸುತ್ತವೆ.

ಮಹಿಳಾ ಭಾಗವಹಿಸುವಿಕೆಯ ಪರಿಣಾಮಗಳು: ಮಹಿಳೆಯರ ಸಕ್ರಿಯ ರಾಜಕೀಯ ಪಾಲ್ಗೊಳ್ಳುವಿಕೆ ಪ್ರಜಾಸತ್ತಾತ್ಮಕ ಸಂಸ್ಥೆಗಳ ಕಾರ್ಯಪದ್ಧತಿ ಮತ್ತು ಗುಣಮಟ್ಟವನ್ನು ಹೆಚ್ಚು ಹೆಚ್ಚು ಗಟ್ಟಿಗೊಳಿಸುತ್ತದೆ. ಇದು ಕೇವಲ ಪ್ರತಿನಿಧಿತ್ವದ ಸಂಖ್ಯೆಯನ್ನು ಹೆಚ್ಚಿಸುವುದಲ್ಲ, ಆಡಳಿತದ ದಿಕ್ಕು, ಆದ್ಯತೆಗಳು ಮತ್ತು ನೀತಿಗಳ ಸ್ವಭಾವವನ್ನು ರೂಪಿಸುತ್ತದೆ. ಮಹಿಳೆಯರ ಅನುಭವ ಮತ್ತು ದೃಷ್ಟಿಕೋನವು ಸಾರ್ವಜನಿಕ ಸಮಸ್ಯೆಗಳ ವಿಶ್ಲೇಷಣೆಗೆ ಹೊಸ ಹೊಸ ಆಯಾಮಗಳನ್ನು ನೀಡುತ್ತವೆ, ಲಿಂಗಸಮಾನತೆ, ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯವನ್ನು ನೀತಿ ರೂಪಣೆಯನ್ನು ಹೆಚ್ಚು ಬಲಪಡಿಸುತ್ತವೆ. ಮಹಿಳಾ ನಾಯಕತ್ವ ಸಹಕಾರಾತ್ಮಕ, ಪಾರದರ್ಶಕ ಮತ್ತು ಜನಕೇಂದ್ರಿತ ಆಡಳಿತವನ್ನು ಉತ್ತೇಜಿಸುತ್ತದೆ. ಇದರಿಂದ ರಾಜಕೀಯ ಸಂಸ್ಕೃತಿಯಲ್ಲಿ ಸಹಭಾಗಿತ್ವ ಮತ್ತು ಸಮಾನತೆಯ ಮೌಲ್ಯಗಳು ಬಲಪಡುವಂತಾಗುತ್ತದೆ. ಹೀಗಾಗಿ, ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸಂಖ್ಯಾತ್ಮಕ ಹಾಗೂ ಗುಣಾತ್ಮಕವಾಗಿ ಬಲಪಡಿಸುವ ಪ್ರಮುಖ ಅಂಶವಾಗಿರುತ್ತದೆ.

ನೀತಿ ರೂಪಣೆಯಲ್ಲಿ ಬದಲಾವಣೆ: ಮಹಿಳಾ ಪ್ರತಿನಿಧಿಗಳು ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ಪೌಷ್ಠಿಕತೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಅವರ ಅನುಭವವು ಕುಟುಂಬ ಮತ್ತು ಸಮುದಾಯದ ಮೂಲಭೂತ ಅಗತ್ಯಗಳಿಗೆ ಹೆಚ್ಚು ಗಮನ ಸೆಳೆಯುತ್ತದೆ. ಮಹಿಳಾ ನಾಯಕತ್ವವು ಭೌತಿಕ ಮೂಲಸೌಕರ್ಯಗಳ ಜೊತೆಗೆ ಮಾನವ ಸಂಪನ್ಮೂಲಗಳ ವೃದ್ಧಿ ಮೇಲೂ ಒತ್ತು ನೀಡುತ್ತದೆ. ಶಾಲೆಗಳ ಸುಧಾರಣೆ, ತಾಯಿ–ಮಗು ಆರೋಗ್ಯ, ಕುಡಿಯುವ ನೀರು ಮತ್ತು ಪೌಷ್ಠಿಕ ಆಹಾರ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಗೆ ಬರುವುದರಿಂದ ಗ್ರಾಮ ಮತ್ತು ನಗರ ಅಭಿವೃದ್ಧಿ ಯೋಜನೆಗಳು ಜನರ ಜೀವನ ಗುಣಮಟ್ಟ ಸುಧಾರಣೆಗೆ ನೆರವಾಗುತ್ತವೆ. ಇದರಿಂದ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ, ಶಿಕ್ಷಣ ಹಾಗೂ ಸುರಕ್ಷತೆಯಲ್ಲಿ ಸಕಾರಾತ್ಮಕ ಬದಲಾವಣೆಗಳು ಕಂಡುಬರುತ್ತವೆ. ಇದು ದೀರ್ಘಕಾಲೀನ ಸಾಮಾಜಿಕ ಅಭಿವೃದ್ಧಿಗೆ ಬುನಾದಿಯಾಗಿರುತ್ತದೆ. ಮಹಿಳಾ ಪ್ರತಿನಿಧಿಗಳ ಸಂವೇದನಾಶೀಲ ದೃಷ್ಟಿಕೋನವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಮಾನವ ಕೇಂದ್ರಿತ ಮತ್ತು ಸಮಾನತೆಯ ಮೂಲಕವಾಗಿ ಮುನ್ನಡೆಸುತ್ತದೆ. ಅವರ ನಿರ್ಧಾರದಲ್ಲಿ ನೀತಿಗಳು ಲಿಂಗ ಸಂವೇದನಾಶೀಲ ಹಾಗೂ ಸಾಮಾಜಿಕ ನ್ಯಾಯವನ್ನು ಹೆಚ್ಚು ಪ್ರತಿಬಿಂಬಿಸುತ್ತವೆ.

ಪಾರದರ್ಶಕ ಆಡಳಿತ: ಮಹಿಳಾ ನಾಯಕತ್ವವು ಸಾರ್ವಜನಿಕ ಸಂಪನ್ಮೂಲಗಳ ಬಳಕೆಯಲ್ಲಿ ಜವಾಬ್ದಾರಿಯುತ ಮತ್ತು ನೈತಿಕ ದೃಷ್ಟಿಕೋನವನ್ನು ತರುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ದೃಢಪಟ್ಟಿದೆ. ಮಹಿಳಾ ಪ್ರತಿನಿಧಿಗಳು ಸಮುದಾಯದೊಂದಿಗೆ ನೇರ ಸಂಪರ್ಕದಲ್ಲಿದ್ದು, ಹಣಕಾಸಿನ ಪಾರದರ್ಶಕ ನಿರ್ವಹಣೆಗೆ ವಿಶೇಷ ಗಮನ ನೀಡುತ್ತಾರೆ. ಅವರ ಆಡಳಿತ ಶೈಲಿ ಸಂವಹನಾತ್ಮಕ ಮತ್ತು ಸಮಾಲೋಚನಾತ್ಮಕವಾಗಿದ್ದು, ಗ್ರಾಮ ಮತ್ತು ವಾರ್ಡ್ ಸಭೆಗಳ ಮೂಲಕ ಜನಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಇದರಿಂದ ಯೋಜನೆಗಳ ಅನುಷ್ಠಾನದಲ್ಲಿನ ಭಾಗವಹಿಸುವಿಕೆ ಹೆಚ್ಚಾಗಿ, ಸಂಪನ್ಮೂಲ ದುರುಪಯೋಗ ತಡೆಯಲಾಗುತ್ತದೆ. ಈ ಪ್ರಕ್ರಿಯೆಯಿಂದ ಭ್ರಷ್ಟಾಚಾರದ ಸಾಧ್ಯತೆ ಕಡಿಮೆಯಾಗುತ್ತಾ, ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಹೆಚ್ಚುತ್ತದೆ. ಸಾರ್ವಜನಿಕ ಮಾಹಿತಿ ಹಂಚಿಕೆಯಿಂದ ಜನರ ವಿಶ್ವಾಸ ಹೆಚ್ಚಾಗಿ, ಪ್ರಜಾಸತ್ತಾತ್ಮಕ ಸಂಸ್ಥೆಗಳ ನಂಬಿಕೆ ಗಟ್ಟಿಗೊಳ್ಳುತ್ತದೆ. ಹೀಗಾಗಿ, ಮಹಿಳಾ ನಾಯಕತ್ವವು ಸುಶಾಸನ, ನೈತಿಕ ಆಡಳಿತ ಮತ್ತು

ಪ್ರಜಾಸತ್ತಾತ್ಮಕ ಮೌಲ್ಯಗಳ ಬಲಪಡಿಸುವ ಪ್ರಮುಖ ಚಾಲಕಶಕ್ತಿಯಾಗಿದೆ.

ಸಾಮಾಜಿಕ ಒಳಗೊಳ್ಳುವಿಕೆ: ಮಹಿಳೆಯರ ಭಾಗವಹಿಸುವಿಕೆ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ದುರ್ಬಲ ವರ್ಗಗಳ ಧ್ವನಿಗೆ ಅವಕಾಶ ನೀಡುತ್ತದೆ. ಮಹಿಳಾ ನಾಯಕತ್ವವು ಸಾಮಾಜಿಕ ಅಸಮಾನತೆಗಳನ್ನು ತಿಳಿದು, ಸಮಾನ ಅವಕಾಶಗಳನ್ನು ಒದಗಿಸುವ ನೀತಿಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಜಾತಿ, ವರ್ಗ, ಧರ್ಮ ಮತ್ತು ಲಿಂಗ ಆಧಾರಿತ ಅಸಮಾನತೆಗಳಿಂದ ಬಳಲುತ್ತಿರುವ ಸಮುದಾಯಗಳ ಸಮಸ್ಯೆಗಳು ಆಡಳಿತಕ್ಕೆ ತಲುಪುತ್ತವೆ. ಮಹಿಳಾ ಪ್ರತಿನಿಧಿಗಳು ಜನಸಮುದಾಯದ ನೆಲಮಟ್ಟದ ಅನುಭವಗಳನ್ನು ರಾಜಕೀಯ ವೇದಿಕೆಗೆ ತಂದು ಒಳಗೊಂಡ ಅಭಿವೃದ್ಧಿಗೆ ಒತ್ತು ನೀಡುತ್ತಾರೆ. ಸ್ವಸಹಾಯ ಗುಂಪುಗಳು ಮತ್ತು ಮಹಿಳಾ ಸಂಘಟನೆಗಳ ಮೂಲಕ ಸಾಮಾಜಿಕ ಜಾಗೃತಿ ಮತ್ತು ಭಾಗವಹಿಸುವಿಕೆ ಹೆಚ್ಚಾಗುತ್ತದೆ. ಪರಿಣಾಮವಾಗಿ, ಸಾರ್ವಜನಿಕ ನೀತಿಗಳು ಮಾನವ ಕೇಂದ್ರಿತ ಮತ್ತು ಸಮಾನತೆಯ ಮೂಲಕ ಸ್ವರೂಪ ಪಡೆಯುತ್ತವೆ. ಇದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆ ಹೆಚ್ಚು ಒಳಗೊಂಡ ಹಾಗೂ ಜನಕೇಂದ್ರಿತವಾಗುತ್ತಾ, ವಿವಿಧ ಜನಸಮುದಾಯಗಳ ಅಗತ್ಯಗಳು ನಿರ್ಧಾರಗಳಲ್ಲಿ ಪ್ರತಿಬಿಂಬಿಸುತ್ತವೆ. ಹೀಗಾಗಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಒಳಗೊಂಡ ಅಭಿವೃದ್ಧಿಯ ದಿಕ್ಕಿನಲ್ಲಿ ಬಲಪಡಿಸುವ ಪ್ರಮುಖ ಅಂಶವಾಗಿದೆ. ಮಹಿಳೆಯರು ನಿರ್ಧಾರ ಪ್ರಕ್ರಿಯೆಯಲ್ಲಿ ಅರ್ಥಪೂರ್ಣ ಪಾಲ್ಗೊಳ್ಳುವಾಗ, ಆಡಳಿತವು ಜನರ ಅಗತ್ಯಗಳು ಮತ್ತು ಆಶೆಗಳ ಪ್ರತಿಬಿಂಬವಾಗುತ್ತದೆ ಮತ್ತು ಸಾಮಾಜಿಕ ನ್ಯಾಯ ಹಾಗೂ ಸಮಾನ ಅವಕಾಶಗಳ ವಿಸ್ತರಣೆಗೆ ದಾರಿ ಮಾಡಿಕೊಡುತ್ತದೆ. ಇದರಿಂದ ನೀತಿಗಳ ಗುಣಮಟ್ಟ ಮತ್ತು ಪರಿಣಾಮಕಾರಿತ್ವ ಹೆಚ್ಚುತ್ತದೆ.

**ಮಹಿಳಾ ಮೀಸಲಾತಿಯ ಮೂಲಕ ಸಂಖ್ಯಾತ್ಮಕ ಪ್ರತಿನಿಧಿತ್ವ ಹೆಚ್ಚಾದರೂ, ಕೆಲವು ಮಿತಿಗಳು ಗೋಚರಿಸುತ್ತವೆ. ಅವುಗಳೆಂದರೆ;**

ಪ್ರಾಕ್ಸಿ ನಾಯಕತ್ವ: ಕೆಲವೇಳೆ ಮಹಿಳಾ ಪ್ರತಿನಿಧಿಗಳ ಪರವಾಗಿ ಪುರುಷ ಕುಟುಂಬ ಸದಸ್ಯರು ನಿರ್ಧಾರಗಳನ್ನು ಕೈಗೊಳ್ಳುವ “ಸರ್ಪಂಚ್ ಪತಿ” ಪ್ರಕ್ರಿಯೆ ಸ್ಥಳೀಯ ಸ್ವಶಾಸನದಲ್ಲಿ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರ ಸ್ವಾಯತ್ತ ನಾಯಕತ್ವಕ್ಕೆ ಅಡ್ಡಿಯಾಗುತ್ತದೆ ಮತ್ತು ಅವರು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಅದರ ಪರಿಣಾಮವಾಗಿಯೇ ಮೀಸಲಾತಿಯಿಂದ ಗುರಿಯಾಗಿರುವ ನೈಜ ಸಬಲೀಕರಣ ಸಾಧನವಾಗುವುದಿಲ್ಲ. ಇದನ್ನು ತಡೆಯಲು ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯ ತರಬೇತಿ, ಕಾನೂನು ಜಾಗೃತಿ, ನಾಯಕತ್ವ ಕೌಶಲ್ಯಾಭಿವೃದ್ಧಿ ಹಾಗೂ ಸಾಮಾಜಿಕ ಮನೋಭಾವದ ಬದಲಾವಣೆ ಅಗತ್ಯವಾಗಿರುತ್ತದೆ. ಸ್ವತಂತ್ರ ನಿರ್ಧಾರ ಕೈಗೊಳ್ಳುವ ಪರಿಸರ ನಿರ್ಮಾಣವಾಗಿದ್ದಾಗಲೇ ಮೀಸಲಾತಿಯ ನಿಜವಾದ ಗುರಿ ಸಾಧನವಾಗುತ್ತದೆ.

ಪಿತೃತ್ವಾಧಾರಿತ ಮನೋಭಾವ: ಸಮಾಜದ ಗಾಢವಾದ ಪಿತೃತ್ವ ಸಂಸ್ಕೃತಿ ಮಹಿಳೆಯರನ್ನು ಗೃಹಪರ ಪಾತ್ರಗಳಿಗೆ ಸೀಮಿತಗೊಳಿಸುತ್ತಾ, ಅವರ ರಾಜಕೀಯ ಸಾಮರ್ಥ್ಯ ಮತ್ತು ನಾಯಕತ್ವವನ್ನು ಪ್ರಶ್ನಿಸುತ್ತದೆ. ಇದರಿಂದ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯಗಳಿಗೆ ಸಮರ್ಪಕ ಮಹತ್ವ ನೀಡದಿರುವುದು, ಸಭೆಗಳಲ್ಲಿ ಅವರ ಮಾತುಗಳನ್ನು ಲಘುವಾಗಿ ಪರಿಗಣಿಸುವುದು ಮತ್ತು ಪ್ರಮುಖ ಸ್ಥಾನಗಳಿಗೆ ಅವಕಾಶ ನೀಡದಿರುವುದು ಕಂಡುಬರುತ್ತದೆ. ಈ ಮನೋಭಾವದಿಂದ ಮಹಿಳೆಯರ ಆತ್ಮವಿಶ್ವಾಸ ಕುಗ್ಗಿ ನಾಯಕತ್ವ

ವಿಕಾಸಕ್ಕೆ ಅಡ್ಡಿಯಾಗುತ್ತದೆ. ಪಿತೃತ್ವಾಧಾರಿತ ಮನೋಭಾವವು ವ್ಯಕ್ತಿಗತ ಮಾತ್ರವಲ್ಲ, ಸಂಸ್ಥಾತ್ಮಕ ಮತ್ತು ರಾಜಕೀಯ ಸಂಸ್ಕೃತಿಯಲ್ಲಿಯೂ ಅಡಗಿರುತ್ತದೆ. ಇದನ್ನು ಬದಲಾಯಿಸಲು ಲಿಂಗಸಮಾನತೆ ಕುರಿತು ಜಾಗೃತಿ, ಶಿಕ್ಷಣ ಮತ್ತು ಸಮಾನ ಅವಕಾಶಗಳ ಅನುಷ್ಠಾನ ಅಗತ್ಯವಾಗಿರುತ್ತದೆ. ಮಹಿಳೆಯರ ಸಾಮರ್ಥ್ಯವನ್ನು ಗೌರವಿಸುವ ಸಮಾಜ ನಿರ್ಮಾಣವಾದಾಗ ಮಾತ್ರ ಅವರ ನೈಜ ಮತ್ತು ಪರಿಣಾಮಕಾರಿ ರಾಜಕೀಯ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ.

ಆರ್ಥಿಕ ಮತ್ತು ಶೈಕ್ಷಣಿಕ ಮಿತಿಗಳು: ಅನೇಕ ಮಹಿಳೆಯರು ಆರ್ಥಿಕ ಸಂಪನ್ಮೂಲಗಳ ಕೊರತೆ, ಶಿಕ್ಷಣದ ಅಭಾವ ಮತ್ತು ರಾಜಕೀಯ ತರಬೇತಿಯ ಕೊರತೆಯಿಂದ ಸವಾಲುಗಳನ್ನು ಎದುರಿಸುತ್ತಾರೆ. ಚುನಾವಣಾ ಪ್ರಚಾರ ಮತ್ತು ಸಂಘಟನೆಗಳಿಗೆ ಹಣಕಾಸಿನ ಅಗತ್ಯವಿದೆ. ಆದರೆ, ಆರ್ಥಿಕ ಸ್ವಾವಲಂಬನೆ ಇಲ್ಲದಿರುವುದರಿಂದ ಅವರ ಸ್ಪರ್ಧಾತ್ಮಕತೆ ಕಡಿಮೆಯಾಗುತ್ತದೆ. ಶೈಕ್ಷಣಿಕ ಹಿನ್ನೆಡೆ ಮತ್ತು ಕಾನೂನು, ಆಡಳಿತ ಅರಿವಿನ ಕೊರತೆಯಿಂದ ನಿರ್ಧಾರಗಳಲ್ಲಿ ಆತ್ಮವಿಶ್ವಾಸ ಕಮ್ಮಿಯಾಗುತ್ತದೆ. ರಾಜಕೀಯ ತರಬೇತಿ, ನಾಯಕತ್ವ ಕೌಶಲ್ಯಾಭಿವೃದ್ಧಿಯ ಕೊರತೆಯಿಂದ ಕೂಡ ಅವರ ಸಾಮರ್ಥ್ಯ ಪೂರ್ಣವಾಗಿ ಬೆಳೆಯದು. ಆದ್ದರಿಂದ, ಮಹಿಳೆಯರ ನೈಜ ಸಬಲೀಕರಣಕ್ಕೆ ಆರ್ಥಿಕ ಬೆಂಬಲ, ನಿರಂತರ ತರಬೇತಿ, ಕಾನೂನು ಹಾಗೂ ಆಡಳಿತ ಜ್ಞಾನ ಮತ್ತು ಶಿಕ್ಷಣ ವಿಸ್ತರಣೆ ಅಗತ್ಯವಾಗಿದೆ. ಈ ಕ್ರಮಗಳಿಂದ ಮಾತ್ರ ಮಹಿಳೆಯರ ಪ್ರತಿನಿಧಿತ್ವವು ಗುಣಾತ್ಮಕ ಪರಿಣಾಮಕಾರಿತ್ವ ಸಾಧಿಸಬಹುದು.

ರಾಜಕೀಯ ಹಿಂಸಾಚಾರ ಮತ್ತು ಒತ್ತಡಗಳು: ಮಹಿಳಾ ನಾಯಕಿಯರು ರಾಜಕೀಯ ಸ್ಪರ್ಧೆಯಲ್ಲಿ ಮಾನಸಿಕ, ಸಾಮಾಜಿಕ ಮತ್ತು ಕೆಲವೊಮ್ಮೆ ದೈಹಿಕ ಒತ್ತಡಗಳನ್ನು ಎದುರಿಸುತ್ತಾರೆ. ಚುನಾವಣಾ ಪ್ರಚಾರದಲ್ಲಿ ಅವಮಾನ, ಲಿಂಗಭೇದಾತ್ಮಕ ಟೀಕೆಗಳು ಹಾಗೂ ಸಾಮಾಜಿಕ ಮಾಧ್ಯಮ ದೌರ್ಜನ್ಯಗಳು ಅವರ ಮನೋಬಲವನ್ನು ಕುಗ್ಗಿಸಬಹುದು. ಕೆಲವೊಮ್ಮೆ ಬೆದರಿಕೆಗಳು, ಬಲವಂತ ಒತ್ತಡಗಳು ಮತ್ತು ದೈಹಿಕ ಹಿಂಸಾಚಾರ ಕೂಡ ಸಂಭವಿಸಬಹುದು. ಈ ಪರಿಸ್ಥಿತಿಗಳು ಮಹಿಳೆಯರ ಸುರಕ್ಷತೆ ಮತ್ತು ಗೌರವಕ್ಕೆ ಧಕ್ಕೆಯಾಗುತ್ತಾ, ಅವರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಕಡಿಮೆ ಮಾಡಬಹುದು. ಇದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಮಾನ ಪ್ರತಿನಿಧಿತ್ವ ಸಾಧಿಸುವುದು ಸವಾಲಾಗಿ ಪರಿಣಮಿಸುತ್ತದೆ. ಆದ್ದರಿಂದ ಮಹಿಳಾ ನಾಯಕಿಯರ ಸುರಕ್ಷತೆಗಾಗಿ ಕಾನೂನು ರಕ್ಷಣೆ, ದೌರ್ಜನ್ಯ ವಿರೋಧಿ ಕ್ರಮಗಳು, ಸಾಮಾಜಿಕ ಜಾಗೃತಿ ಮತ್ತು ಬೆಂಬಲಾತ್ಮಕ ರಾಜಕೀಯ ವಾತಾವರಣ ಅಗತ್ಯ. ಭಯರಹಿತ ಮತ್ತು ಗೌರವಯುತ ರಾಜಕೀಯ ಪರಿಸರ ನಿರ್ಮಾಣವಾದಾಗವೇ ಪ್ರಜಾಸತ್ತಾತ್ಮಕ ಗುಣಮಟ್ಟ ನಿಜವಾಗಿ ಬಲವಾಗುತ್ತದೆ.

ಪಕ್ಷೀಯ ಬೆಂಬಲದ ಕೊರತೆ: ರಾಜಕೀಯ ಪಕ್ಷಗಳು ಮಹಿಳಾ ಅಭ್ಯರ್ಥಿಗಳಿಗೆ ಸಮಾನ ಅವಕಾಶ ನೀಡುವಲ್ಲಿ ಕೆಲವೊಮ್ಮೆ ಹಿಂಜರಿಯುತ್ತವೆ. ಅವರು ಗೆಲುವಿನ ಸಾಧ್ಯತೆ ಕಡಿಮೆ ಕ್ಷೇತ್ರಗಳಿಗೆ ಮಾತ್ರ ಉಮೇದುವಾರಿಕೆಯನ್ನು ನೀಡುತ್ತಾರೆ ಅಥವಾ ನಿರ್ಧಾರಾತ್ಮಕ ಸ್ಥಾನಗಳಲ್ಲಿ ಭಾಗಿಯಾಗಿಸುವುದಿಲ್ಲ. ಪಕ್ಷಗಳ ಸಂಘಟನೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆ ಇದ್ದು, ಅವರ ಧ್ವನಿ ನೀತಿ ರೂಪಣೆ ಮತ್ತು ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ಸೀಮಿತವಾಗುತ್ತದೆ. ಇದರಿಂದ ಮಹಿಳೆಯರ ರಾಜಕೀಯ ಉತ್ತರಣೆಯು ನಿಧಾನಗೊಳ್ಳುತ್ತದೆ ಮತ್ತು ಲಿಂಗ ಅಸಮಾನತೆ ಮುಂದುವರಿಯುತ್ತದೆ. ಸಮಾನ ತರಬೇತಿ, ಸಂಪನ್ಮೂಲ ಮತ್ತು ಬೆಂಬಲಗಳ ಕೊರತೆಯಿಂದ ಮಹಿಳೆಯರ ಸ್ಪರ್ಧಾತ್ಮಕತೆ ಕುಂದುತ್ತದೆ. ಮೀಸಲಾತಿ ಸಂಖ್ಯಾತ್ಮಕ ಪ್ರತಿನಿಧಿತ್ವವನ್ನು ಹೆಚ್ಚಿಸಿದರೂ, ಗುಣಾತ್ಮಕ ಸಬಲೀಕರಣವೂ ಮಾತ್ರ ಆತ್ಮವಿಶ್ವಾಸ, ನಿರ್ಧಾರ ಸಾಮರ್ಥ್ಯ, ಕಾನೂನು ಮತ್ತು ನಾಯಕತ್ವ ಕೌಶಲ್ಯಗಳ ಅಭಿವೃದ್ಧಿ ಮತ್ತು ಸಾಮಾಜಿಕ

ಮನೋಭಾವದ ಬದಲಾವಣೆಯ ಅಗತ್ಯವಿದೆ. ಪಕ್ಷೀಯ, ಆಡಳಿತಾತ್ಮಕ ಮತ್ತು ಕಾನೂನು ಮಟ್ಟದಲ್ಲಿ ಸಮಾನ ಅವಕಾಶ ಮತ್ತು ಬೆಂಬಲದೊಂದಿಗೆ ಮಾತ್ರ ಮಹಿಳೆಯರ ನೈಜ ಸಬಲೀಕರಣ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಲಪಡಿಸುವಿಕೆಯ ದೀರ್ಘಕಾಲೀನ ಸಾಧನವಾಗುತ್ತದೆ. ಮಹಿಳೆಯರ ಸಕ್ರಿಯ ಮತ್ತು ಸಮಾನ ಪಾಲ್ಗೊಳ್ಳುವಿಕೆಯಿಲ್ಲದೆ ಬಲವಾದ ಪ್ರಜಾಸತ್ತಾತ್ಮಕ ವ್ಯವಸ್ಥೆ ಸಾಧ್ಯವಿಲ್ಲ.

**ಮಹಿಳಾ ಸಬಲೀಕರಣದ ಕಾರ್ಯತಂತ್ರಗಳು**

ರಾಜಕೀಯ ಮತ್ತು ಆಡಳಿತ ತರಬೇತಿ: ಮಹಿಳೆಯ ನೈಜ ಸಬಲೀಕರಣಕ್ಕೆ ರಾಜಕೀಯ ಮತ್ತು ಆಡಳಿತ ತರಬೇತಿ ಅತ್ಯಂತ ಅವಶ್ಯಕವಾಗಿದೆ. ಚುನಾವಣೆಯಲ್ಲಿ ಗೆಲುವಿನ ಜೊತೆಗೆ ಆಡಳಿತ ಕ್ರಮಗಳು, ಕಾನೂನು ನಿಯಮಗಳು, ವಾರ್ಷಿಕ ಆಯ-ವ್ಯಯದ ಪ್ರಕ್ರಿಯೆಗಳು ಮತ್ತು ನೀತಿ ರೂಪಣೆಯ ಅರಿವು ಅಗತ್ಯವಾಗಿರುತ್ತದೆ. ರಾಜಕೀಯ ತರಬೇತಿಗಳು ಸಭೆ ನಿರ್ವಹಣೆ, ಚರ್ಚಾ ಕೌಶಲ್ಯ, ಸಾರ್ವಜನಿಕ ಭಾಷಣ ಮತ್ತು ನಾಯಕತ್ವ ಗುಣಗಳನ್ನು ವೃದ್ಧಿಸಿ, ಆತ್ಮವಿಶ್ವಾಸ ಹೆಚ್ಚಿಸುತ್ತವೆ. ಆಡಳಿತ ತರಬೇತಿಗಳು ಬಜೆಟ್ ವಿಶ್ಲೇಷಣೆ, ಯೋಜನೆ ರೂಪಣೆ, ಅನುಷ್ಠಾನ ಮತ್ತು ಕಾನೂನು ಪ್ರಕ್ರಿಯೆಗಳ ತಿಳುವಳಿಕೆಯನ್ನು ನೀಡುತ್ತವೆ. ನಿರಂತರ ತರಬೇತಿ, ಮಾರ್ಗದರ್ಶನ ಮತ್ತು ಅನುಭವ ಹಂಚಿಕೆ ವೇದಿಕೆಗಳು ಮಹಿಳೆಯರ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ. ಈ ಸಮಗ್ರ ತರಬೇತಿ ಮೂಲಕ ಮಹಿಳೆಯರ ಪ್ರತಿನಿಧಿತ್ವ ಗುಣಾತ್ಮಕವಾಗಿ ಬಲಪಡುತ್ತದೆ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳ ಕಾರ್ಯಕ್ಷಮತೆ ಮತ್ತು ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ.

ಕಾನೂನು ಜಾಗೃತಿ ಮತ್ತು ಹಕ್ಕುಗಳ ಅರಿವು: ಮಹಿಳೆಯರ ಸಬಲೀಕರಣದಲ್ಲಿ ಕಾನೂನು ಜಾಗೃತಿ ಮತ್ತು ಹಕ್ಕುಗಳ ಅರಿವು ಅತ್ಯಂತ ಮುಖ್ಯವಾಗಿರುತ್ತದೆ. ನಮ್ಮ ಸಂವಿಧಾನದಲ್ಲಿ ಕೊಡಮಾಡಿರುವ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯ ಹಕ್ಕುಗಳ ಕುರಿತು ಸ್ಪಷ್ಟ ತಿಳಿವು ಮಹಿಳೆಯರಿಗೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಲು ನೆರವಾಗುತ್ತದೆ. ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ತಮ್ಮ ಅಧಿಕಾರ, ಕರ್ತವ್ಯ ಮತ್ತು ಕಾನೂನು ಜವಾಬ್ದಾರಿಗಳನ್ನು ಅರಿತುಕೊಂಡಾಗ ಮಾತ್ರ ಸ್ವತಂತ್ರ ನಿರ್ಧಾರ ಕೈಗೊಳ್ಳಬಹುದು. ಪಂಚಾಯತ್ ರಾಜ್ ಮತ್ತು ಸ್ಥಳೀಯ ಸಂಸ್ಥೆಗಳ ಕಾನೂನು, ಬಜೆಟ್ ಹಕ್ಕುಗಳು, ಮೇಲ್ವಿಚಾರಣೆ ಹಾಗೂ ದೂರು ಪರಿಹಾರ ಕ್ರಮಗಳ ಅರಿವು ಅದನ್ನು ಸಾಧ್ಯಮಾಡುತ್ತದೆ. ಕಾನೂನು ಜಾಗೃತಿ ಶೋಷಣೆ, ಪ್ರಾಕ್ಸಿ ನಾಯಕತ್ವ, ರಾಜಕೀಯ ಹಿಂಸಾಚಾರ ಮತ್ತು ಲಿಂಗಭೇದದ ವಿರುದ್ಧ ಹೋರಾಡಲು ಶಕ್ತಿಯನ್ನು ನೀಡುತ್ತದೆ. ಅವರು ಜನಸಮುದಾಯದ ಇತರ ಮಹಿಳೆಯರಿಗೂ ಹಕ್ಕುಗಳ ಬಗೆಗೂ ಕೂಡ ಹೆಚ್ಚಿನ ಅರಿವನ್ನು ಮೂಡಿಸಿ, ಆ ಮೂಲಕ ಸಾಮಾಜಿಕ ನ್ಯಾಯ ವಿಸ್ತಾರಕ್ಕೆ ಸಹಕಾರಿಯಾಗುತ್ತಾರೆ. ಆದ್ದರಿಂದ ಕಾನೂನು ಸಾಕ್ಷರತಾ ಶಿಬಿರಗಳು, ಜಾಗೃತಿ ಅಭಿಯಾನಗಳು ಮತ್ತು ತರಬೇತಿಗಳು ಮಹಿಳೆಯರ ಹಕ್ಕುಗಳ ಅರಿವನ್ನು ಹೆಚ್ಚಿಸಲು ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆಗೆ ಅಗತ್ಯ ಹೆಜ್ಜೆಯಾಗಿವೆ.

ಆರ್ಥಿಕ ಸ್ವಾವಲಂಬನೆ ಕಾರ್ಯಕ್ರಮಗಳು: ಮಹಿಳೆಯರ ನೈಜ ಸಬಲೀಕರಣ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಪರಿಣಾಮಕಾರಿಯಾದ ಪಾಲ್ಗೊಳ್ಳುವಿಕೆಗೆ ಆರ್ಥಿಕ ಸ್ವಾವಲಂಬನೆ ಅತ್ಯಂತ ಮುಖ್ಯವಾಗಿದೆ. ಸ್ವತಂತ್ರ ಆರ್ಥಿಕ ಸಂಪನ್ಮೂಲಗಳಿಲ್ಲದೆ ಮಹಿಳೆಯರು ರಾಜಕೀಯ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ನಿರ್ಧಾರಗಳನ್ನು

ಸ್ವತಂತ್ರವಾಗಿ ಕೈಗೊಳ್ಳಲು ಅಡ್ಡಿ ಎದುರಿಸುತ್ತಾರೆ. ಆರ್ಥಿಕ ಸ್ವಾವಲಂಬನೆ ಕಾರ್ಯಕ್ರಮಗಳು ಉದ್ದಿಮೆ, ಸ್ವಸಹಾಯ ಸಂಘಗಳು, ಸಾಲ ಯೋಜನೆಗಳು, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸಿ ಮಹಿಳೆಯರ ಆದಾಯ, ಸ್ವಾಭಿಮಾನ ಮತ್ತು ನಿರ್ಧಾರ ಸಾಮರ್ಥ್ಯವನ್ನು ವೃದ್ಧಿಸುತ್ತವೆ. ಇದರಿಂದ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದು, ಜನಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಮತ್ತು ನೀತಿ ನಿರ್ವಹಣೆಯಲ್ಲಿ ಶಕ್ತಿಶಾಲಿಯಾಗಿ ಭಾಗವಹಿಸುವುದು ಸಾಧ್ಯವಾಗುತ್ತದೆ. ಹೀಗಾಗಿ, ಆರ್ಥಿಕ ಸ್ವಾವಲಂಬನೆ ಮಹಿಳೆಯರ ವೈಯಕ್ತಿಕ ಮತ್ತು ಪ್ರಜಾಸತ್ತಾತ್ಮಕ ಪ್ರಗತಿಗೆ ಅವಶ್ಯಕವಾಗಿದ್ದು, ಅವರ ಗುಣಾತ್ಮಕ ಪ್ರತಿನಿಧಿತ್ವವನ್ನು ಸುಧಾರಿಸಲು ಸಹಾಯಕವಾಗಿದೆ.

ಡಿಜಿಟಲ್ ಸಾಕ್ಷರತೆ: ಮಹಿಳೆಯರ ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆ ಮತ್ತು ಸಬಲೀಕರಣದಲ್ಲಿ ಡಿಜಿಟಲ್ ಸಾಕ್ಷರತೆ ಆಧುನಿಕ ಕಾಲಮಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಂಟರ್ನೆಟ್, ಸಾಮಾಜಿಕ ಮಾಧ್ಯಮ ಮತ್ತು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಸಕ್ರಿಯತೆ ಮಹಿಳೆಯರಿಗೆ ತಕ್ಷಣದ ಜಾಗೃತಿ, ತಾಂತ್ರಿಕ ಹಾಗೂ ಸಂವಹನ ಸಾಮರ್ಥ್ಯಗಳನ್ನು ಒದಗಿಸುತ್ತದೆ. ಚುನಾವಣಾ ಪ್ರಕ್ರಿಯೆ, ನೀತಿ ರೂಪಣೆ ಮತ್ತು ಸರ್ಕಾರದ ಯೋಜನೆಗಳ ಕುರಿತು ಸುಲಭವಾಗಿ ಮಾಹಿತಿ ಪಡೆಯಬಹುದು ಮತ್ತು ತಮ್ಮ ಜನಸಮುದಾಯದ ಸಮಸ್ಯೆಗಳನ್ನು ಆನ್‌ಲೈನ್ ವೇದಿಕೆಗಳಲ್ಲಿ ಹಂಚಿಕೊಳ್ಳಬಹುದು. ದೂರಸ್ಥ ಪ್ರದೇಶಗಳಲ್ಲಿಯೂ ಆನ್‌ಲೈನ್ ಚರ್ಚೆ, ತರಬೇತಿ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಡಿಜಿಟಲ್ ಸಾಕ್ಷರತೆ ಮಹಿಳೆಯರಿಗೆ ಸ್ವಾಯತ್ತ ನಿರ್ಧಾರ ಸಾಮರ್ಥ್ಯ, ಜನಸಮುದಾಯ ಜಾಗೃತಿ ಮತ್ತು ನೀತಿ ರೂಪಣೆಯಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಲು ಶಕ್ತಿ ನೀಡುತ್ತದೆ. ಹೀಗಾಗಿ, ಮಹಿಳೆಯರ ಡಿಜಿಟಲ್ ಸಬಲೀಕರಣವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಗುಣಮಟ್ಟ ಮತ್ತು ಸಬಲೀಕರಣಕ್ಕೆ ಹೆಚ್ಚು ಹೆಚ್ಚು ಅನಿವಾರ್ಯವಾಗಿರುತ್ತದೆ.

ಮಹಿಳಾ ಪ್ರತಿನಿಧಿಗಳ ಜಾಲ ನಿರ್ಮಾಣ: ಮಹಿಳೆಯರ ಸಬಲೀಕರಣ ಮತ್ತು ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆಗೆ ಮಹಿಳಾ ಪ್ರತಿನಿಧಿಗಳ ಜಾಲ ನಿರ್ಮಾಣ ಅತ್ಯಂತ ಪರಿಣಾಮಕಾರಿ ಸಾಧನವಾಗಿರುತ್ತದೆ. ಈ ಜಾಲವು ಮಹಿಳಾ ನಾಯಕಿಯರಿಗೆ ಅನುಭವ ಹಂಚಿಕೊಳ್ಳಲು, ಸವಾಲುಗಳನ್ನು ಚರ್ಚಿಸಲು ಮತ್ತು ಸಮಾನ ದೃಷ್ಟಿಕೋನ ಹೊಂದಿರುವ ಇತರ ಮಹಿಳಾ ನಾಯಕರು ಮತ್ತು ತಜ್ಞರಿಂದ ಮಾರ್ಗದರ್ಶನ ಪಡೆಯಲು ಅವಕಾಶ ನೀಡುತ್ತದೆ. ವಿವಿಧ ಜನಸಮುದಾಯ ಮತ್ತು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದವರು ತಮ್ಮ ಯಶಸ್ಸು ಹಾಗೂ ವಿಫಲತೆಯ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ರಾಜಕೀಯ ಒತ್ತಡ, ಭ್ರಷ್ಟಾಚಾರ, ವೈಯಕ್ತಿಕ ಸವಾಲುಗಳಲ್ಲಿ ಪರಸ್ಪರ ಬೆಂಬಲ ನೀಡುತ್ತಾರೆ. ಜಾಲದ ಮೂಲಕ ತಾಜಾ ನೀತಿ, ಯೋಜನೆ ಮತ್ತು ಕಾನೂನು ಮಾಹಿತಿ ಹರಡುತ್ತದೆ. ಹಿರಿಯ ಮಹಿಳಾ ನಾಯಕರು ಹೊಸವರಿಗೆ ಮಾರ್ಗದರ್ಶನ ನೀಡಿ ಬಲವರ್ಧನೆಗೊಳಿಸುತ್ತಾರೆ. ಇವು "ಪ್ರಾಕ್ಸಿ ನಾಯಕತ್ವ" ಮತ್ತು ಸಾಮಾಜಿಕ-ಸಾಂಸ್ಕೃತಿಕ ಅಡ್ಡಿಗಳನ್ನು ತಡೆಯಲು ಸಹಕಾರಿಯಾಗುತ್ತವೆ. ಇದರ ಜೊತೆಗೆಯೇ ಪ್ರಜಾಸತ್ತಾತ್ಮಕ ಸಂಸ್ಥೆಗಳ ಗುಣಾತ್ಮಕ ಪ್ರತಿನಿಧಿತ್ವ ಮತ್ತು ನಿರ್ವಹಣಾ ಸಾಮರ್ಥ್ಯ ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ, ಮಹಿಳಾ ಪ್ರತಿನಿಧಿಗಳ ಜಾಲ ನಿರ್ಮಾಣ ನೈಜ ಸಬಲೀಕರಣ, ಸಹಕಾರಾತ್ಮಕ ರಾಜಕೀಯ ಮತ್ತು ಪ್ರಜಾಸತ್ತಾತ್ಮಕ ಬಲಪಡಿಸುವಿಕೆಗೆ ಅವಶ್ಯಕವಾಗಿದೆ.

**ಉಪಸಂಹಾರ**

ಮಹಿಳೆಯರ ಭಾಗವಹಿಸುವಿಕೆ ಮತ್ತು ಸಬಲೀಕರಣವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲಪಡಿಸುವಿಕೆಗೆ ಮೂಲಭೂತ ಅಂಶವಾಗಿದೆ. ಮಹಿಳೆಯರು ನಿರ್ಧಾರ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗ, ಆಡಳಿತವು ಕೇವಲ ಸಂಖ್ಯಾತ್ಮಕ ಪ್ರತಿನಿಧಿತ್ವದಷ್ಟೇ ಅಲ್ಲ, ಗುಣಾತ್ಮಕ ಮೌಲ್ಯಗಳನ್ನೂ ಪ್ರತಿಬಿಂಬಿಸುವಂತೆ ರೂಪುಗೊಳ್ಳುತ್ತದೆ. ಕೇವಲ ಮೀಸಲಾತಿಯ ಮೂಲಕ ಮಹಿಳೆಯರ ಪ್ರತಿನಿಧಿತ್ವವನ್ನು ಹೆಚ್ಚಿಸುವುದೇ ಸಾಕಾಗುವುದಿಲ್ಲ. ನೈಜ ಪ್ರಭಾವ ಮತ್ತು ಕಾರ್ಯನಿರ್ವಹಣೆಗೆ ಗುಣಾತ್ಮಕ ನಾಯಕತ್ವ, ಸಾಮಾಜಿಕ ಮನೋಭಾವದ ಪರಿವರ್ತನೆ, ಆರ್ಥಿಕ ಸ್ವಾವಲಂಬನೆ, ರಾಜಕೀಯ ಮತ್ತು ಆಡಳಿತ ತರಬೇತಿ, ಕಾನೂನು ಜಾಗೃತಿ, ಡಿಜಿಟಲ್ ಸಾಕ್ಷರತೆ, ಮತ್ತು ಪ್ರತಿನಿಧಿಗಳ ಜಾಲ ನಿರ್ಮಾಣ ಮುಂತಾದ ಅಂಶಗಳು ಅವಶ್ಯಕವಾಗಿರುತ್ತದೆ. ಈ ಸಮಗ್ರ ಕ್ರಮಗಳು ಕೈಗೊಳ್ಳಲ್ಪಟ್ಟಾಗ ಮಾತ್ರ ಮಹಿಳೆಯರ ಸಬಲೀಕರಣವು ನೈಜವಾಗಿ ಸಾಧನೆಗೊಂಡು, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹೆಚ್ಚು ಜನಕೇಂದ್ರಿತ, ಪಾರದರ್ಶಕ, ಜವಾಬ್ದಾರಿಯುತ ಮತ್ತು ಒಳಗೊಂಡ ರೀತಿಯಲ್ಲಿ ಹೆಚ್ಚು ಬಲಪಡಿಸುತ್ತದೆ. ಹೀಗಾಗಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಪ್ರಜಾಸತ್ತಾತ್ಮಕ ಸಂಘಟನೆಗಳ ದೀರ್ಘಕಾಲೀನ ಸ್ಥಿರತೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಸಾಧನೆಗೆ ಪ್ರಮುಖ ಚಾಲಕಶಕ್ತಿಯಾಗಿದ್ದು, ಪ್ರಗತಿಪರ ಪ್ರಜಾಸತ್ತಾತ್ಮಕ ರಾಷ್ಟ್ರ ನಿರ್ಮಾಣಕ್ಕೆ ಅಂಶವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು
2. ಮಹಿಳಾ ಸಬಲೀಕರಣ ಮತ್ತು ಸ್ಥಳೀಯ ರಾಜಕಾರಣ, ಎನ್.ಶ್ರೀಕಾಂತ್, ಕನ್ನಡ ವಿಶ್ವವಿದ್ಯಾಲಯ ಪ್ರಕಾಶನ, ಹಂಪಿ
3. ಭಾರತೀಯ ರಾಜಕೀಯ ಮತ್ತು ಲಿಂಗ ಸಮಾನತೆ, ಡಾ.ಎಸ್.ಕೆ.ಚಂದ್ರಶೇಖರ್, ಪೇಜ್ ಪಬ್ಲಿಕೇಶನ್ಸ್, ಮೈಸೂರು
4. ಪಂಚಾಯತ್ ರಾಜ್ ಮತ್ತು ಮಹಿಳಾ ಮೀಸಲಾತಿ, ಶ್ರೀಮತಿ ಲಕ್ಷ್ಮೀವರ್ಧನ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು
5. ಮಹಿಳಾ ನಾಯಕತ್ವ ಮತ್ತು ಭಾಗವಹಿಸುವಿಕೆ, ಡಾ.ಲಕ್ಷ್ಮಣಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
6. ಭಾರತೀಯ ಸಮಾಜದಲ್ಲಿ ಮಹಿಳಾ ರಾಜಕೀಯ ಪಾತ್ರ, ಡಾ.ಗೋಪಾಲಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ಸ್ಥಳೀಯ ಸ್ವಶಾಸನ ವ್ಯವಸ್ಥೆ: ಸವಾಲುಗಳು ಮತ್ತು ಸಾಧನೆಗಳು, ಎಂ.ಬಿ.ರಾಮಚಂದ್ರ, ಕರ್ನಾಟಕ ರಾಜ್ಯ ಪ್ರಶಸ್ತಿ ಪ್ರಕಾಶನ, ಬೆಂಗಳೂರು
8. ಮಹಿಳಾ ಸಬಲೀಕರಣ: ಸೈದ್ಧಾಂತಿಕ ಮತ್ತು ಕಾರ್ಯಾತ್ಮಕ ದೃಷ್ಟಿಕೋನ, ಡಾ.ವಿ.ಸೀತಾರಾಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.